# ಕ್ರೀಡಾ ವರದಿ 2016–17

2016 –17 ನೇ ಸಾಲಿಗಾಗಿ ಪ್ರಾಂಶುಪಾಲರ ಅಧ್ಯಕ್ಷತೆಯಲ್ಲಿ ಕ್ರೀಡಾ ಸಮಿತಿಯ ರಚನೆ ಮಾಡಲಾಯಿತು. ಡಾ. ನೀಲಕಂಠಸ್ವಾಮಿ ಮುಖ್ಯಸ್ಥರು ಇತಿಹಾಸ ವಿಭಾಗ, ಪ್ರೋ ಜಯಲಕ್ಮೀ.ಬಿ ಮುಖ್ಯಸ್ಥರು ಕನ್ನಡ ವಿಭಾಗ, ಹಾಗೂ ಶ್ರೀ ಮೋಹನ್‌ಕುಮಾರ್ ಸಿ. ಬಿ ಅಧೀಕ್ಷಕರು ರವರನ್ನು ಸದಸ್ಯರನ್ನಾಗಿ ನೇಮಕ ಮಾಡಲಾಯಿತು.

ದಿನಾಂಕ 20–07–2016 ರಂದು ನಡೆದ ಮೈಸೂರು ವಿಶ್ವವಿದ್ಯಾನಿಲಯ ವಾರ್ಷಿಕ ಕ್ರೀಡಾ ಸಭೆಯಲ್ಲಿ ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಖೋ–ಖೋ ನೋಡೆಲ್ ಸೆಂಟರ್‌ನ್ನು ಪಡೆದು ಒಂದು ತಿಂಗಳ ಶಿಬಿರವನ್ನು ಏರ್ಪಡಿಸಿ ತರಬೇತಿಯನ್ನು ಕೊಡಿಸಲಾಯಿತು.

ದಿನಾಂಕ 03–08–2016 ರಂದು ನಡೆದ ಮೈಸೂರು ವಿಶ್ವವಿದ್ಯಾಲಯ ಕೃಷ್ಣರಾಜವಲಯ ಮಟ್ಟದ ಸಭೆಯಲ್ಲಿ ನಮ್ಮ ಕಾಲೇಜಿನ ಆಶ್ರಯದಲ್ಲಿ ಸಾಫ್ಟಬಾಲ್ ಪಂದ್ಯಾವಳಿ ಆಯೋಜಿಸುವಂತೆ ಕ್ರಮ ಕೈಗೊಂಡು , ದಿನಾಂಕ 10–10–2016 ಪಂದ್ಯಾವಳಿ ನಡೆಸಲಾಯಿತು. ಈ ಪಂದ್ಯಾವಳಿಯಲ್ಲಿ ನಮ್ಮ ಕಾಲೇಜು ತಂಡ ಪ್ರಥಮ ಸ್ಥಾನ ಪಡೆಯಿತು.

ದಿನಾಂಕ 13–08–2016 ರಂದು ಖೋ– ಖೋ ತರಬೇತಿ ಶಿಬಿರಕ್ಕೆ ತಂಡವನ್ನು ಆಯ್ಕೆ ಮಾಡಲಾಯಿತು.

ದಿನಾಂಕ 15–08–2016 ರಂದು ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲಾಯಿತು.

ದಿನಾಂಕ 19–08–2016 ರಿಂದ 21–08–2016 ರವರೆಗೆ ದೈಹಿಕ ಶಿಕ್ಷಣ ನಿರ್ದೇಶಕರಾದ ಜಯಶಂಕರ್ ರವರು ಮೈಸೂರು ವಿಶ್ವವಿದ್ಯಾಲಯ ಬ್ಯಾಡ್‌ಮಿಂಟನ್ ತಂಡದ ಆಯ್ಕೆಗಾಗಿ ಆಯ್ಕೆ ತಂಡದ ಸದಸ್ಯರಾಗಿ ಭಾಗವಹಿಸಿರುತ್ತಾರೆ.

ರಾಷ್ಟ್ರೀಯ ಕ್ರೀಡಾ ದಿನಚಾರಣೆ ಅಂಗವಾಗಿ ದಿನಾಂಕ 29–08–2016 ರಂದು ಕಾಲೇಜಿನ ವಿದ್ಯಾರ್ಥಿಗಳಿಗಾಗಿ ರಸಪ್ರಶ್ನೆ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ವಿಜೇತರಾದ ಜಗದೀಶ್ ಕೆ.ಎಂ , ಶಿವಕುಮಾರ್, ಕಿರಣ್ ಕುಮಾರ್ ಡಿ., ರವರಿಗೆ ಬಹುಮಾನವನ್ನು ವಿತರಿಸಲಾಯಿತು. ಹಾಗೂ ಭಾರತೀ ಪದವಿ ಕಾಲೇಜು ಕಿರುಗಾವಲು ಇಲ್ಲಿನ ಬಾಲ್‌ಬ್ಯಾಡ್‌ಮಿಂಟನ್ ಆಟಗಾರರ ಜೊತೆ ಸ್ನೇಹ ಪಂದ್ಯಾವಳಿ ಏರ್ಪಡಿಸಲಾಗಿತ್ತು.

ದಿನಾಂಕ 08–09–2016 ರಂದು ಮೈಸೂರು ವಿಶ್ವವಿದ್ಯಾಲಯ ಕೃಷ್ಣರಾಜವಲಯ ಮಟ್ಟದ ಖೋ–ಖೋ ಪಂದ್ಯಾವಳಿಗೆ ಭಾಗವಹಿಸಲಾಯಿತು.

ಮೈಸೂರು ವಿಶ್ವವಿದ್ಯಾಲಯ ಅಂತರ ಕಾಲೇಜುಗಳ 12 ಕಿ.ಮೀ ಗುಡ್ಡಗಾಡು ಓಟದ ಸ್ಪರ್ದೆಗೆ ಕಾಲೇಜಿನ ವಿದ್ಯಾರ್ಥಿಗಳಾದ ಸುನೀಲ್ ಬಿ.ಎಂ. ಪ್ರಭುಲಿಂಗು ಡಿ, ಕಿರಣ್ ಕುಮಾರ್ ಡಿ , ಅರವಿಂದ ಸತೀಶ್, ಮತ್ತು ದರ್ಶನ್ ಎಸ್ ಭಾಗವಹಿಸಿರುತ್ತಾರೆ.

ದೈಹಿಕ ಶಿಕ್ಷಣ ನಿರ್ದೇಶಕರಾದ ಜಯಶಂಕರ್ ರವರು ಮೈಸೂರು ವಿಶ್ವವಿದ್ಯಾಲಯ ಬ್ಯಾಡ್ ಮಿಂಟನ್ ತಂಡದ ವ್ಯವಸ್ಥಾಪಕರಾಗಿ ದಿನಾಂಕ 26–09–2016 ರಿಂದ 07–10–2016 ರವರೆಗೆ ಭಾಗವಹಿಸಿರುತ್ತಾರೆ.

ದಿನಾಂಕ 03–09–2016 ರಂದು ನಡೆದ ತಾಲ್ಲೂಕು ಮಟ್ಟದ ದಸರ ಕ್ರೀಡಾಕೂಟದಲ್ಲಿ ಕಾಲೇಜಿನ ವಿದ್ಯಾರ್ಥಿಗಳಾದ ಸುನೀಲ್ ಬಿ ಎಂ, ನಾಗೇಂದ್ರ ಎಸ್ ಎಂ ಭಾಗವಹಿಸಿ ಕ್ರಮವಾಗಿ ಥ್ರೋಬಾಲ್ ,1500 ಮೀ ಓಟ ಹಾಗೂ 400 ಮೀ ಓಟ ,ಥ್ರೋಬಾಲ್ ,4*100 ಮೀ ಓಟದ ರಿಲೇ ಸ್ಪರ್ದೆಯಲ್ಲಿ ಪ್ರಶಸ್ತಿ ಪಡೆದಿರುತ್ತಾರೆ.

ದಿನಾಂಕ 11-01–2017 ರಂದು ನಡೆದ ಮೈಸೂರು ವಿಶ್ವವಿದ್ಯಾಲಯ ಕೃಷ್ಣರಾಜವಲಯ ಮಟ್ಟದ ಮಹಿಳಾ ವಾಲಿಬಾಲ್ ಪಂದ್ಯಾವಳಿ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಹುಣಸೂರು ಇಲ್ಲಿ ನಡೆಯಿತು , ಈ ಪಂದ್ಯವಳಿಯಲ್ಲಿ ನಮ್ಮ ಕಾಲೇಜು ತಂಡ ಭಾಗವಹಿಸಿತ್ತು.

ದಿನಾಂಕ 27–01–2017 ರಂದು ನಡೆದ ಮೈಸೂರು ವಿಶ್ವವಿದ್ಯಾಲಯ ಕೃಷ್ಣರಾಜವಲಯ ಮಟ್ಟದ ಪುರುಷರ ಟೇಬಲ್ ಟೆನಿಸ್, ಬ್ಯಾಡ್ ಮಿಂಟನ್ ಹಾಗೂ ಮಹಿಳೆಯರ ಬ್ಯಾಡ್‌ಮಿಂಟನ್ ಪಂದ್ಯಾವಳಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಬಿಳಿಕೆರೆ ಇಲ್ಲಿ ನಡೆಯಿತು.ಈ ಪಂದ್ಯಾವಳಿಗೆ ನಮ್ಮ ಕಾಲೇಜು ತಂಡಗಳು ಬಾಗವಹಿಸಿದ್ದವು.

ದಿನಾಂಕ 08–02–2017 ರಂದು ನಡೆದ ಮೈಸೂರು ವಿಶ್ವವಿದ್ಯಾಲಯ ಕೃಷ್ಣರಾಜವಲಯ ಮಟ್ಟದ ಪುರುಷರ ಬಾಲ್‌ಬ್ಯಾಡ್‌ಮಿಂಟನ್ ಪಂದ್ಯಾವಳಿಯು ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಹೆಚ್. ಡಿ.ಕೋಟೆ ಇಲ್ಲಿ ನಡೆಯಿತು. ಈ ಪಂದ್ಯಾವಳಿಗೆ ನಮ್ಮ ಕಾಲೇಜು ತಂಡ ಸೆಮಿಫೈನಲ್ ವರೆಗೆ ತಲುಪಿತು.

ದಿನಾಂಕ 23–02–2017 ರಂದು ನಡೆದ ಮೈಸೂರು ವಿಶ್ವವಿದ್ಯಾಲಯ ಕೃಷ್ಣರಾಜವಲಯ ಮಟ್ಟದ ಪುರುಷರ ಚೆಸ್ ಪಂದ್ಯಾವಳಿಯು ಶ್ರೀ ಡಿ.ದೇವರಾಜುಅರಸು ಸರ್ಕಾರಿ ಪ್ರಥಮದರ್ಜೆ ಕಾಲೇಜು ಇಲ್ಲಿ ನಡೆಯಿತು. ಈ ಪಂದ್ಯಾವಳಿಗೆ ನಮ್ಮ ಕಾಲೇಜು ತಂಡ ಭಾಗವಹಿಸಿತ್ತು.

ದಿನಾಂಕ 24–03–2017 ರಿಂದ 07–04 2017 ರವರೆಗೆ ಕಾಲೇಜಿನ ಅಂತರ ತರಗತಿಗಳ ನಡುವೆ ಪಂದ್ಯಾವಳಿ ನಡೆಸಲಾಯಿತು. ಅಥ್ಲೇಟಿಕ್ಸ್ ಕ್ರೀಡೆಗಳಲ್ಲಿ ಪುರುಷರ ವಿಭಾಗದಲ್ಲಿ ನಾಗೇಂದ್ರ ಎಸ್,ಎಂ ಚಾಂಪಿಯನ್ ಆದರೆ , ಮಹಿಳೆಯರ ವಿಭಾಗದಲ್ಲಿ ಅಶ್ವಿನಿ ಹೆಚ್,ವಿ ಚಾಂಪಿಯನ್ ಆದರು.

ಈ ಎಲ್ಲ ಕಾರ್ಯಕ್ರಮಗಳಿಗೆ ಸಹಕರಿಸಿದ ಕಾಲೇಜಿನ ಪ್ರಾಂಶುಪಾಲರು, ಕ್ರೀಡಾ ಸಮಿತಿಯ ಸದಸ್ಯರು, ಅದ್ಯಾಪಕರು , ಅದ್ಯಾಪಕೇತರರು ಹಾಗೂ ವಿದ್ಯಾರ್ಥಿಗಳಿಗೆ ಧನ್ಯವಾದಗಳು.